ಅ) ಕ್ರಮವಾಗಿ ಈ ಯೋಜನೆಗೆ ತಗಲುವ ವೆಚ್ಚ ಹಾಗೂ ಅವುಗಳಿಂದ ಆಗಬಹುದಾದ ನೀರಾವರಿ ಕ್ಷೇತ್ರ ಎಷ್ಟು?

ಇ) ಸದರಿ ಪ್ರತಿಯೊಂದು ಯೋಜನೆಗೆ ಜಾಗತಿಕ ಬ್ಯಾಂಕಿನಿಂದ ಹಣ ದೊರತಿದೆಯೇ?

ಈ) ಹಾಗಿದ್ದಲ್ಲಿ, ಸದರಿ ಯೋಜನೆಗಳನ್ನು ಪ್ರಾರಂಭಿಸಲು ವಿಳಂಬ ಏಕೆ.

ಉ) ಈ ಯೋಜನೆಗಳನ್ನು ಕಾರ್ಯಗತ ಮೊದಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಹಳ್ಳೂರ ಏತ ನೀರಾವರಿ ಯೋಜನೆ (2) ರಾಮತೀರ್ಥಏತ ನೀರಾವರಿ ಯೋಜನೆಗಳನ್ನು ಹಿಂದೆಯೇ ಸರ್ಕಾರವು ಮಂಜೂರು ಮಾಡಿರುವುದನ್ನು ನಿಗಮವು ಗಮನಿಸಿದೆ. ಆದರೆ, ಭೈರನಪಾದ 2ನೇ ಹಂತದ ಏತ ನೀರಾವರಿ ಯೋಜನೆಯನ್ನು ಈ ಹಿಂದೆ ಸರ್ಕಾರವು ಮಂಜೂರು ಮಾಡಿರುವುದಿಲ್ಲ.

ಆ) ಕ್ರಮವಾಗಿ ಈ ಯೋಜನೆಗಳಿಗೆ ತಗಲುವ ವೆಚ್ಚ ಹಾಗೂ ಅವುಗಳಿಂದ ಆಗಬಹುದಾದ ನೀರಾವರಿ ಕ್ಷೇತ್ರ ಈ ಕೆಳಗಿನಂತಿದೆ.

ಏತ ನೀರಾವರಿ ಯೋಜನೆ ಹೆಸರು	ಅಂದಾಜಿನ ವೆಚ್ಚ ರೂ.(ಲಕ್ಷಗಳಲ್ಲಿ)	ಆಗಬಹುದಾದ ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ
1. ಏತನೀರಾವರಿ ಯೋಜನೆ ಹಳ್ಳೂರಹತ್ತಿರ	175.765	890
2. ಏತನೀರಾವರಿ ಯೋಜನೆ ರಾಮತೀರ್ಥ ಹತ್ತಿರ	21.909	607
3. ಏತ ನೀರಾವರಿ ಯೋಜನೆ ಭೈರನಪಾದ 2ನೇ ಹಂತ	126.30	1822

ಇ) ಸದರಿಪ್ರತಿಯಂದು ಯೋಜನೆಗೆ ಜಾಗತಿಕ ಬ್ಯಾಂಕಿನಿಂದ ಸಾಲ ದೊರೆತಿರುವುದಿಲ್ಲ.

ಈ) ಯೋಜನೆಗಳಿಗೆ ಬೇಕಾದ ಭೂಮಿಯು ಸಿಗದೇ ಇರುವುದು,ಯೋಜನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಧೋರಣಾತ್ಮಕ ನೀತಿಯು ಇತ್ತೀಚೆಗೆ ಅಂತಿಮ ರೂಪವನ್ನು ಪಡೆದಿದ್ದು ಇವೇ ಮೊದಲಾದ ಕಾರಣಗಳಿಂದ ಯೋಜನೆಗಳನ್ನು ಪ್ರಾರಂಭಿಸಲು ವಿಳಂಬವಾಗಿದೆ. ಹಾಗೂ ನಬಾರ್ಡ್‌ನಿಂದ ಸಾಲ ಪಡೆಯಬೇಕಾಗಿದೆ

ಉ) ಹೌದು.

ಹುಡ್ಕೋ ಮನೆಗಳ ಬಗ್ಗೆ.

3058 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಹುಡ್ಕೋ ಯೋಜನೆಗಳ ಮೂಲಕ 86-87, 87-88, 88-89, 89-90. 90-91ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ಕಟ್ಟಲು ಆದೇಶ ನೀಡಲಾಗಿತ್ತು.

ಆ) ಮೇಲ್ಕಂಡ ಸಾಲುಗಳಲ್ಲಿ ಮಂಜೂರಾದ ಹಾಗೂ ಖರ್ಚಾದ ಹಣ ಎಷ್ಟು?

ಇ) ಕಟ್ಟದೇ ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವ ಹಂತದಲ್ಲಿದೆ (ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಹುಡ್ಕೋ ಯೋಜನೆಯಲ್ಲಿ ಈ ಕೆಳಕಂಡ ಮನೆಗಳನ್ನು ಕಟ್ಟಲು ಆದೇಶನೀಡಿರುತ್ತದೆ.

ವರ್ಷ	ಮನೆಗಳು
1986-87	213
1987-88	226
1988-89	286
1989-90	243
1990-91	96

ಮೇಲ್ಕಂಡ ಮನೆಗಳಿಗೆ ಮಂಜೂರಾದ ಹಣ ಮತ್ತು ಖರ್ಚಾದ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ.

ಅ) ವರ್ಷ	ಮಂಜೂರಾದ ಹಣ (ರೂ.ಲಕ್ಷಗಳಲ್ಲಿ)	ಖರ್ಚಾದ ಹಣ (ರೂ.ಲಕ್ಷಗಳಲ್ಲಿ)
1986-87	7.563	2.202
1987-88	12.11	7.947
1988-89	9.80	6.48
1989-90	6.00	2.16
1990-91	2.80	-

ಇ) ಬಾಕಿ ಉಳಿದಿರುವ ಮನೆ ಮತ್ತು ಬಾಕಿ ಉಳಿದಿರುವ ಮನೆಗಳ ಹಂತ ಕೆಳಕಂಡಂತೆ ಇರುತ್ತದೆ.

ವರ್ಷ	ಬಾಕಿ ಉಳಿದಿರುವ ಮನೆಗಳು	ಹಂತ ತಳ ಪಾಯ	ತೊಲೆ ಮಟ್ಟ	ಮೇಲ್ಛಾವಣಿ	ಪ್ರಾರಂಭ ಆಗದೇ ಇರುವ ಮನೆ
1986-87	42	3	-	35	4
1987-88	123	60	10	44	9
1988-89	206	67	73	55	11
1989-90	243	53	-	12	178
1990-91	96	-	-	-	96

ಸಹಾಯಕ ಕಾರ್ಯಪಾಲಕ ಅಭಿಯಂತರರ ನೇರ ನೇಮಕಾತಿ ಕುರಿತು.

3102 - ಶ್ರೀ ಎಂ. ಪಿ. ವೆಂಕಟೇಶ್ (ಪೆಗ್ಗಡದೇವನ ಕೋಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ನೇರವಾಗಿ ನೇಮಕ ಮಾಡಿಕೊಳ್ಳುವ ಉದ್ದೇಶವಿದ್ದಲ್ಲಿ ಸರ್ಕಾರಕ್ಕೆದೆಯೇ ಹಾಗೂ ಈ ನೇಮಕಾತಿಗೆ ಕಾರಣವೇನು?